**<u>ಸಾಕ್ಷಿಯನ್ನು ಈ ದಿನ ದಿಃ 28.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u>

1. ದಿಃ 24.12.2020 ರಂದು ಜಯಸೂರ್ಯ ನಮ್ಮ ಠಾಣೆಗೆ ಬಂದಾಗ ಮಧ್ಯಾಹ್ನ 02.00 ರಿಂದ 02.30 ಆಗಿತ್ತು. ಅವನ ಮೊಬೈಲ್ ವಿವೊ ಕಂಪನಿಯ 1603 ದಾಗಿತ್ತು. ಸದರಿ ಮೊಬೈಲ್ ನ ಸಿಮ್ ಯಾರ ಹೆಸರಿನಲ್ಲಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಠಾಣೆಗೆ ಮೊಬೈಲ್ ನ್ನು ತೆಗೆದುಕೊಂಡು ಜಯಸೂರ್ಯ ಒಬ್ಬನೇ ಬಂದಿದ್ದ. ಸದರಿ ಮೊಬೈಲ್ ಆಫ್ ಆಗಿತ್ತು. ತನಿಖಾಧಿಕಾರಿಯ ಮುಂದೆ ಆತ ಅದನ್ನು ಆನ್ ಮಾಡಿದ. ಆನ್ ಮಾಡಿದ ನಂತರ ಆ ಮೊಬೈಲ್ ಗೆ ಬಂದಿದ್ದಂತಹ ಕೊನೆಯ ಕಾಲ್ , ಕೊನೆಯ ಮೆಸೇಜ್, ಕೊನೆಯ ವ್ಯಾಟ್ಸ್ ಅಪ್ ಮೆಸೇಜ್ ಯಾವುದಾಗಿದ್ದವು ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಆ ಮೂರು ಪೋಟೋಗಳು ಮತ್ತು ಮೂರು ಮೆಸೇಜ್ ಗಳು 1 ನೇ ಆರೋಪಿ ವಿನಯ್ ಪರೋಟಾ ನ ಮೊಬೈಲ್ ನಿಂದ ಜಯ ಸೂರ್ಯನ ಮೊಬೈಲ್ ಗೆ ಬಂದಿದ್ದವು. ಅದನ್ನು ಖುದ್ದು ಜಯ ಸೂರ್ಯನೇ ತಿಳಿಸಿದ. 1 ನೇ ಆರೋಪಿ ವಿನಯ್ ಪರೋಟಾನ ಮೊಬೈಲ್ ನಂ.8660343740 ಆಗಿತ್ತು. ಜಯಸೂರ್ಯನ ಮೊಬೈಲ್ ನ ವ್ಯಾಟ್ಸ್ ಅಪ್ ಆ್ಯಪ್ ತೆರೆದು ನೋಡಿದಾಗ ಅದರಲ್ಲಿ 1 ನೇ ಆರೋಪಿ ಕಳುಹಿಸಿದ್ದ 3 ಪೋಟೋಗಳು ಮತ್ತು ಮೆಸೇಜ್ ಗಳು, ಜಯ ಸೂರ್ಯ ನೋಡಿದ್ದ ಎನ್ನುವ ಬಗ್ಗೆ **Blue Tick** ಆಗಿತ್ತೋ ಇಲ್ಲವೋ ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಆ ದಿನ ಆ 3 ಪೋಟೋಗಳ ಪ್ರಿಂಟ್ ತೆಗೆಸಿರುವುದಿಲ್ಲ. ಆ ದಿನ 1 ನೇ ಆರೋಪಿಯ ಮೊಬೈಲ್

ತನಿಖಾಧಿಕಾರಿಯವರಲ್ಲಿ ಇರಲಿಲ್ಲ. ಸದರಿ ಮೊಬೈಲ್ ನ್ನು , ಸ್ವಿಚ್ ಆಫ್ ಮಾಡಿ ನಂತರ ಅಮಾನತ್ತು ಪಡಿಸಿಕೊಳ್ಳಲಾಯಿತು. ನಿಪಿ 22 ಮಹಜರ್ ನಲ್ಲಿ ಈ ಬಗ್ಗೆ ನಮೂದಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 22 ನ್ನು ನಾನು ಟೈಪ್ ಮಾಡುವಾಗ ನ್ಯಾಯಾಲಯದ ಮುಂದೆ ನೋಡಿದ ಎಂ ಒ 11 ಮತ್ತು ನಿಪಿ 14 ರಿಂದ 17 ನ್ನು ನೋಡಿರಲಿಲ್ಲ ಎನ್ನುವುದು ಸರಿಯಲ್ಲ.

2. ತನಿಖಾಧಿಕಾರಿಯವರು ಕರೆದಿದ್ದರಿಂದ ನಾನು ಅಶೋಕಪುರಂ ಪೋಲೀಸ್ ಠಾಣೆಯ ಮೊದಲನೇ ಮಹಡಿಯಲ್ಲಿರುವ ಸೈಬರ್ ಕ್ರೈಂ ಠಾಣೆಗೆ ಹೋದೆ.

3. ಸೈಬರ್ ಕ್ರೈಂ ಠಾಣೆಯಲ್ಲಿದ್ದ ಮಧು ಎನ್ನುವವರಿಗೆ ದಿಃ 24.12.2020 ರಂದು ಅಮಾನತ್ತು ಪಡಿಸಿಕೊಂಡಿದ್ದ ಜಯ ಸೂರ್ಯನ ಮೊಬೈಲ್ ನಲ್ಲಿದ್ದ ಎಕ್ಸ್ ಟ್ರಾಕ್ಟ ಗಳನ್ನು ತೆಗೆಯಲು ತನಿಖಾಧಿಕಾರಿಗಳು ಕೊಟ್ಟಿದ್ದರು. ಅಲ್ಲಿಗೆ ಜಯಸೂರ್ಯನನ್ನು ಕರೆದುಕೊಂಡು ಹೋಗಿರಲಿಲ್ಲ. ದಿಃ 24.12.2020 ರಂದು ತನಿಖಾಧಿಕಾರಿಯವರು ಜಯ ಸೂರ್ಯನ ಮೊಬೈಲ್ ಅಮಾನತ್ತು ಪಡಿಸಿಕೊಂಡಾಗ , ಅಮಾನತ್ತು ಪ್ರಕ್ರಿಯ ಪೂರ್ಣಗೊಂಡ ನಂತರ ಆ ಮೊಬೈಲನ್ನು **Flight Mode** ಇಟ್ಟು ಸ್ವಿಚ್ ಆಫ್ ಮಾಡಿದರು. ಮೊಬೈಲನ್ನು **Fight mode** ಗೆ ಇಟ್ಟಾಗ ಅದನ್ನು ಸ್ವಿಚ್ ಆಫ್ ಮಾಡಲು ಆಗುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ತನಿಖಾಧಿಕಾರಿಯವರು ಆ ಮೊಬೈಲನ್ನು **Flight mode** ಗೆ ಇಟ್ಟು ಆಫ್ ಮಾಡಿರಬಹುದು. ನಾನು ಕೇವಲ ಎಲ್ಲವನ್ನು ಟೈಪ್ ಮಾಡಿಕೊಳ್ಳುತ್ತಿದ್ದೆ ಎನ್ನುತ್ತಾರೆ. ಸದರಿ ಸೈಬರ್ ಕ್ರೈಂ ಠಾಣೆಯಲ್ಲಿ ಮಧು ರವರು ಜಯ ಸೂರ್ಯನ ಮೊಬೈಲ್ ನಲ್ಲಿದ್ದ ಪೋಟೋಗಳನ್ನು ಎಕ್ಸ್ ಟ್ರಾಕ್ಟ ಮಾಡಿ ಪ್ರಿಂಟ್ ತೆಗೆದುಕೊಟ್ಟಿರಬಹುದು. ಮಧು ರವರು ಈ ಪೋಟೋಗಳು ಮತ್ತು ಮೆಸೇಜ್ ಗಳು

ಯಾವ ಮೊಬೈಲ್ ನಂಬರ್ ನಿಂದ ಜಯ ಸೂರ್ಯನ ಮೊಬೈಲ್ ಗೆ ಬಂದಿವೆ ಎನ್ನುವುದನ್ನು ಹೇಳಿದರೋ ಇಲ್ಲವೋ ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಆ ಪೋಟೋಗಳಲ್ಲಿ , ಸಮಯ ಮತ್ತು ದಿನಾಂಕಗಳ ನಮೂದು ಇರುವುದಿಲ್ಲ. ಆದರೆ ಆ ಮೊಬೈಲ್ ನಲ್ಲಿ ಸಮಯ ಮತ್ತು ದಿನಾಂಕದ ನಮೂದು ಇರುತ್ತದೆ. ಈ ವಿಷಯವನ್ನು ನಿಪಿ 29 ರಲ್ಲಿ ನಮೂದಿಸಿರುವುದಿಲ್ಲ. ನಿಪಿ 30 ಮತ್ತು 31 ಪೋಟೋಗಳನ್ನು ಮೈಸೂರು ನಗರದ ಸೈಬರ್‌ಕ್ರೈಂ ಪೋಲೀಸ್ ಠಾಣೆಯಲ್ಲಿ ತೆಗೆದಿರುವುದಿಲ್ಲ ಎನ್ನುವುದು ಸರಿಯಲ್ಲ.

4. 1 ನೇ ಆರೋಪಿಯನ್ನು ಯಾವ ದಿನ ದಸ್ತಗಿರಿ ಮಾಡಿಕೊಂಡು ಬಂದರು ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಮೊಬೈಲ್ **Samsung Galaxy A-21-S** ದಾಗಿತ್ತು. ಅದರಲ್ಲಿ ಸಿಮ್ ಇರಲಿಲ್ಲ. ಅದು **Android** ಮೊಬೈಲ್. ಆನ್ ಆಗಿರಲಿಲ್ಲ. ಆಗ ಜಯಸೂರ್ಯ ಇರಲಿಲ್ಲ. 1 ನೇ ಆರೋಪಿ ಹಾಜರಿದ್ದ. ಆ ಮೊಬೈಲ್ ನ್ನು ಆನ್ ಮಾಡಿದಾಗ ಗ್ಯಾಲರಿಯಲ್ಲಿ ಎಷ್ಟು ದಿನಗಳ ಪೋಟೋಗಳು ಇದ್ದವು ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. 1 ನೇ ಆರೋಪಿ ತನಿಖಾಧಿಕಾರಿಯ ಮುಂದೆ ವ್ಯಾಟ್ಸ್ ಅಪ್ ನ್ನು **Uninstall** ಮಾಡಿ ಪೋಟೋಗಳನ್ನು ಡಿಲೀಟ್ ಮಾಡಿರುತ್ತೇನೆ ಎಂದು ತಿಳಿಸಿದ . ಗ್ಯಾಲರಿಯಲ್ಲಿದ್ದ ಪೋಟೋಗಳನ್ನು ಸಹ ಡಿಲೀಟ್ ಮಾಡಿರುತ್ತೇನೆ ಎಂದು ತಿಳಿಸಿದ್ದ. ನಿಪಿ 14 ರಿಂದ 17 ಪೋಟೋಗಳು ಈ 1 ನೇ ಆರೋಪಿಯ ಮೊಬೈಲ್ ನಲ್ಲಿ ಇರಲಿಲ್ಲ. ಸೈಬರ್ ಕ್ರೈಂ ಠಾಣೆಯ ಮಧು ರವರನ್ನು ಸಿಮ್ ಇಲ್ಲದೇ ಇರುವ ಮೊಬೈಲ್ ನಲ್ಲಿ ವ್ಯಾಟ್ಸ್ ಅಪ್ ನ್ನು **uninstall** ಮಾಡಿ ಪೋಟೋಗಳನ್ನು ಡಿಲೀಟ್ ಮಾಡಬಹುದೇ ಎಂದು ನಾನು ಕೇಳಿರುವುದಿಲ್ಲ. 1 ನೇ ಆರೋಪಿಯಿಂದ ಯಾವುದೇ ಮೊಬೈಲನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೂಂಡಿರುವುದಿಲ್ಲ

ಎನ್ನುವುದು ಸರಿಯಲ್ಲ. ಆದ್ದರಿಂದ ಜಯಸೂರ್ಯನನ್ನು ಅಂದು ಠಾಣೆಗೆ ಕರೆಸಿರಲಿಲ್ಲ ಎನ್ನುವುದು ಸರಿಯಲ್ಲ, ಅಂತಹ ಯಾವುದೇ ಅಮಾನತ್ತು ಮಹಜರ್ ನ್ನು ಅಲ್ಲಿ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. 1 ನೇ ಆರೋಪಿ ದಿಃ 24.12.2020 ರಂದು ಕೊನೆಯ ಕಾಲ್ ನ್ನು ಯಾರಿಗೆ ಮಾಡಿದ್ದ ಎನ್ನುವುದನ್ನು ನಾನು ಪರಿಶೀಲಿಸಿರುವುದಿಲ್ಲ.

5. ದಿಃ 03.03.2021 ರಂದು ಡ್ಯೂಪ್ಲಿಕೇಟ್ ಸಿಮ್ ನ್ನು ಮೈಸೂರಿನ ಅರಸು ರಸ್ತೆಯಲ್ಲಿ ಖರೀದಿಸಿದ ಬಗ್ಗೆ ತನಿಖಾಧಿಕಾರಿ ಮತ್ತು 1 ನೇ ಆರೋಪಿ ತಿಳಿಸಿದರು. ಸದರಿ ಡ್ಯೂಪ್ಲಿಕೇಟ್ ಸಿಮ್ ನ್ನು ಪುನಃ 1 ನೇ ಆರೋಪಿಯ ಮೊಬೈಲ್ ಗೆ ಹಾಕುವಾಗ ಸದರಿ ಮೊಬೈಲನ್ನು ಮೊಹರು ಮಾಡಿದ ಬಿಳಿಯ ಬಟ್ಟೆಯಲ್ಲಿ ಇಡಲಾಗಿತ್ತು. ಆ ಮೊಬೈಲ್ ಗೆ ಸಿಮ್ ಕಾರ್ಡ ನ್ನು ಪಂಚರ ಸಮಕ್ಷಮ ಅಳವಡಿಸಲಾಯಿತು. ಪಂಚರು ರಾಜು ಮತ್ತು ಜಾನ್ ಪೀಟರ್ ಎನ್ನುವವರು.

6. ಅದನ್ನು ಸೈಬರ್ ಕ್ರೈಂ ಪೋಲೀಸ್ ಠಾಣೆಗೆ ಎಕ್ಸ್ ಟ್ರಾಕ್ಟ ಗಾಗಿ 06.03.2021 ರಂದು ತೆಗೆದುಕೊಂಡು ಹೋಗಲಾಯಿತು. ದಿಃ 03.03.2021 ರಿಂದ 06.03.2021 ರವರೆಗೆ ಸದರಿ ಮೊಬೈಲ್ ತನಿಖಾಧಿಕಾರಿಯವರ ಸುರ್ಪದಿಯಲ್ಲಿತ್ತು. ನಿಪಿ 36 ರಂತೆ ಯಾವುದೇ ಮಹಜರ್ ನ್ನು ನಮ್ಮ ಠಾಣೆಯಲ್ಲಿ ಮಾಡಿ ಎಂ ಒ 12 ನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ. ಎಂ ಒ 12 ನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎನ್ನುವುದು ಸರಿಯಲ್ಲ. ನಿಪಿ 36 ರಲ್ಲಿ ಸದರಿ ಮೊಬೈಲ್ ದಿಃ 03.03.2021 ರಿಂದ 06.03.2021 ರವರೆಗೆ ತನಿಖಾಧಿಕಾರಿಯವರ ಸುಪರ್ದಿಯಲ್ಲಿತ್ತು ಎನ್ನುವುದನ್ನು ನಮೂದಿಸಿರುವ ಅಗತ್ಯತೆ ಇರಲಿಲ್ಲ. ಹೀಗಾಗಿ ನಮೂದಿಸಿರುವುದಿಲ್ಲ.

7. ದಿಃ 06.03.2021 ರಂದು ಸೈಬರ್ ಪೋಲೀಸ್ ಠಾಣೆಗೆ ಪಂಚರು, ನಾನು, ತನಿಖಾಧಿಕಾರಿ ಹೋದೆವು. ಆ ದಿನ 1 ನೇ ಆರೋಪಿಯ ಮೊಬೈಲನ್ನು ಮಾತ್ರ ಎಕ್ಸ್ ಟ್ರಾಕ್ಟ ಗಾಗಿ ತೆಗೆದುಕೂಂಡು ಹೋಗಲಾಗಿತ್ತು. ಮಧು ರವರ ಬಳಿಗೆ ತೆಗೆದುಕೊಂಡು ಹೋದಾಗ ಆ ಮೊಬೈಲ್ ಗೆ ಸಿಮ್ ನ್ನು ಅಳವಡಿಸಲಾಗಿತ್ತು. ಮಧು ರವರು **Technology** ಯನ್ನು ಬಳಸಿ ನೋಡಿದಾಗ ಆ ಮೊಬೈಲ್ ನಲ್ಲಿ ಎಷ್ಟು ಪೋಟೊೋಗಳಿದ್ದವು, ಎಷ್ಟು ಡಿಲೀಟ್ ಆಗಿವೆ , ಎನ್ನುವ ಬಗ್ಗೆ ಪರಿಶೀಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಚಾ,ಸಾ. 23 ಮಧು ರವರು ಅಲ್ಲಿ ಪರಿಶೀಲನೆ ಮಾಡುತ್ತಿದ್ದಾಗ ನಾನು ಟೈಪ್ ಮಾಡುತ್ತಿದ್ದೆ. **U-Fed software** ಮೂಲಕ ಮಾಹಿತಿ ಸಿಕ್ಕಿತು ಎಂದು ತನಿಖಾಧಿಕಾರಿಯವರು ತಿಳಿಸಿದರು. ಪೆನ್ ಡ್ರೈವ್ ಗೆ ಡಾಟಾ ಎಕ್ಸ್ ಟ್ರಾಕ್ಟ ನ್ನು ವರ್ಗಾವಣೆ ಮಾಡಿಕೊಂಡರು. ಅಲ್ಲಿ ಯಾವುದೇ ಡಾಟಾ ಎಕ್ಸ್ ಟ್ರಾಕ್ಟ ಗಳನ್ನು ಪಡೆದಿರುವುದಿಲ್ಲ ಮತ್ತು ಅವುಗಳನ್ನು ಪೆನ್ ಡ್ರೈವ್ ಗೆ ವರ್ಗಾವಣೆ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 32 ನ್ನು ಮೈಸೂರಿನ ಸೈಬರ್ ಕ್ರೈಂ ಪೋಲೀಸ್ ಠಾಣೆಯಲ್ಲಿ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಸದರಿ ಠಾಣೆಯಲ್ಲಿ ನಾನು ಅದನ್ನು ಟೈಪ್ ಮಾಡಿ ಸಹಿ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಯವರ ಹೇಳಿಕೆಯಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. ದಿಃ 02.02.2021 ರಂದು ಘಟನಾ ಸ್ಥಳಕ್ಕೆ ನಾನು, ಪಂಚರು ಮತ್ತು ತನಿಖಾಧಿಕಾರಿಯವರು ಚಾ,ಸಾ.29 ರವರನ್ನು ಕರೆದುಕೊಂಡು ಹೋಗಿದ್ದೆವು. ಘಟನೆ ನಡೆದ ದಿನದಂದು ಆ ಮನೆಗೆ ಖುದ್ದು ಭೇಟಿ ನೀಡಿದ್ದೆ. ನಿಪಿ 4 ಮತ್ತು 5 ಪೋಟೋಗಳಲ್ಲಿ ನಾನು ಇರುವುದಿಲ್ಲ ಎನ್ನುವುದು ಸರಿ . ನಿಪಿ 2 ಮತ್ತು 3

ಪೋಟೋಗಳಲ್ಲಿ ನಾನು ಇದ್ದೇನೆ. ನಕಾಶೆಗೆ ನಾನು ಸಹಿ ಹಾಕಿರುವುದಿಲ್ಲ. ನಾನು ಚಾ,ಸಾ. 29 ರವರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿರಲಿಲ್ಲ ಎನ್ನುವುದು ಸರಿಯಲ್ಲ. ದಿಃ 24.12.2020 ರಿಂದ 02.02.2021 ರವರೆಗೆ ನೆಡದ ಪ್ರಕ್ರಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ತನಿಖಾಧಿಕರಿಯವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**